ನೋಡಿಕೋಬೇಕು ಅಂದರು. ಅಮ್ಮನಿಗೆ ಈ ವಿಷಯ ತಿಳಿಸಲಿಲ್ಲ. ತಿಳಿಸಿದರೆ ಏನಾಗುತ್ತೋ ಅಂತ ಭಯ. ಎರಡು ತಿಂಗಳ ಹಿಂದೆ ಅಪ್ಪ ತೀರಿಕೊಂಡರು. ಆಶ್ರಮದವರ ಸಹಾಯದಿಂದ ನಾನೇ ಅಂತ್ಯಕ್ರಿಯೆ ಮಾಡಿದೆ. ಅಪ್ಪ ಯುಎಸ್‌ಗೆ ಹೋಗಿದ್ದಾರೆ ಅಂತ ಅಮ್ಮನಿಗೆ ಸುಳ್ಳು ಹೇಳಿದ್ದೀನಿ.

ಈಗ ಅಮ್ಮನಿಗೆ ಭಯದ ಗೀಳು ಶುರುವಾಗಿದೆ. ಇವತ್ತು ರಾತ್ರಿಯೇ ಸತ್ತು ಹೋಗ್ತೀನಿ ಅನ್ನೋ ಭಯ. ನಿದ್ದೆಯಲ್ಲೇ ನನ್ನ ಜೀವ ಹೋಗಿ ಬಿಡುತ್ತೆ ಅಂತಾರೆ. ನಿಮ್ಮನ್ನ ಇನ್ನೊಂದು ಸಲ ಊಟಕ್ಕೆ ಅಂತ ಕರಕೊಂಡು ಬಾ ಅಂತ ಒತ್ತಾಯ ಮಾಡ್ತಾರೆ. ನಾನು ಹೋದ ಮೇಲೆ ಈ ಮನೆ, ನನ್ನ ಬ್ಯಾಂಕ್ ಬ್ಯಾಲೆನ್ಸ್ ಯಾರಿಗೂ ಕೊಡಬೇಡ ಅಂತಾರೆ. ಮದುವೆ ಮಾಡಿಕೊ ಅನ್ನೊ ಒತ್ತಾಯ ಹೆಚ್ಚಾಗಿದೆ. ನಿಮ್ಮಪ್ಪನ ಹಾಗೆ ನೀನೂ ಆಗಬಾರದು. ನೀನು ಯಾರನ್ನು ಇಷ್ಟಪಟ್ಟರೂ ಸರಿ ಅವಳ ಜತೆ ಮದುವೆ ಮಾಡಿಸ್ತೀನಿ ಅಂತಾರೆ.

ಅಪ್ಪ, ಅಮ್ಮ ಇಬ್ಬರ ಜೀವನ ನೋಡಿದ ಮೇಲೆ ನಂಗೆ ಈ ಕುಟುಂಬ, ಮದುವೆ ವ್ಯವಸ್ಥೆಯ ಬಗ್ಗೆ ಜಿಗುಪ್ಸೆ ಬಂದುಬಿಟ್ಟಿದೆ. ಪ್ರತಿ ದಿನ ಮನೆಯಿಂದ ಹೊರಡುವಾಗ ಇವತ್ತಾದರೂ ನೀನು ಇಷ್ಟಪಟ್ಟಿರೋಳನ್ನು ಕರಕೊಂಡು ಬಾ ಅಂತಾರೆ.

ಸಂಜೆ ಮನೆಗೆ ಹೋಗೊ ಹೊತ್ತಿಗೆ ನೀಟಾಗಿ ಡ್ರೆಸ್ ಮಾಡಿಕೊಂಡು ಒಡವೆಗಳನ್ನು ಹಾಕಿಕೊಂಡು ಕೂತಿರ್ತಾರೆ. ನೀವು ಬಂದ ದಿನ ನೋಡಿದಿರಲ್ಲ ಹಾಗೆ. ನಾನೊಬ್ಬನೇ ಬಂದೆ ಅಂತ ಅವರಿಗೆ ಸಿಟ್ಟು ಬರುತ್ತೆ. ಸ್ವಲ್ಪ ಹೊತ್ತು ಏನೂ ಮಾತಾಡದೆ ಕೂತಿರ್ತಾರೆ. ಆಮೇಲೆ ಟೀವಿ ಮುಂದೆ ಕೂತು ಒಂದೆರಡು ಡ್ರಿಂಕ್ಸ್ ತಗೊಂಡು, ಹನ್ನೊಂದು ಗಂಟೆ ತನಕ ಕೂತಿದ್ದು, ಆಮೇಲೆ ಮಲಗ್ತಾರೆ. ಕೆಲವು ಸಲ ಊಟವೂ ಮಾಡಲ್ಲ, ಅವರ ದಿನಚರಿ ಬದಲಾಗಿದೆ. ಕುಡಿಯ ಬೇಡ... ನಿದ್ದೆ ಮಾತ್ರೆ ತಗೋಬೇಡ ಅಂದರೂ ಕೇಳಲ್ಲ.

ಅಮ್ಮ ನನ್ನನ್ನು ಬಿಟ್ಟು ಹೋಗ್ತಾರೆ ಅಂತ ನನಗೂ ಅನ್ನಿಸೋಕೆ ಶುರುವಾಗಿದೆ. ನೀವು ನನ್ನ ಅಕ್ಕನ ಹಾಗೆ... ನಿಮಗೆ ಎಲ್ಲವನ್ನೂ ಹೇಳಬೇಕು ಅಂತಿದ್ದೆ. ನಾನು ಮಾತಾಡಬೇಕು ಅಂತ ಬಂದಾಗಲೆಲ್ಲ ನೀವು ಅವಾಯ್ಡ್ ಮಾಡ್ತ ಇದ್ರಿ. ನಂಗೊಬ್ಬ ಅಕ್ಕ ಇದ್ದಳು. ಸಣ್ಣ ವಯಸ್ಸಲ್ಲೇ ನಾಯಿ ಕಡಿದು ರೇಬಿಸ್ ಬಂದು ಸತ್ತು ಹೋದ್ಲು. ಅವಳು ಇದ್ದಿದ್ರೆ ನಿಮ್ಮ ಹಾಗೆ ಇರ್ತಿದ್ಲು' ಅಂತ ಹೇಳುವಷ್ಟರಲ್ಲಿ ಅವನಿಗೆ ಅಳು ತಡೆಯಲಾಗಲಿಲ್ಲ. ಮಗುವಿನಂತೆ ಬಿಕ್ಕಿ ಬಿಕ್ಕಿ ಅಳತೊಡಗಿದ... ಇಬ್ಬರೂ ಸ್ವಲ್ಪ ಹೊತ್ತು ಹಾಗೇ ಕೂತಿದ್ದರು.

'ಜಯದೇವ್, ಏಳಿ ಎಲ್ಲಾ ಸರಿ ಹೋಗುತ್ತೆ. ಜೀವನದಲ್ಲಿ ಬರೊ ತಿರುವುಗಳ ಬಗ್ಗೆ ನಿರ್ಲಿಪ್ತ ಭಾವನೆ ಬೆಳೆಸಿಕೊಳ್ಳಬೇಕು. ನಿಂಗೂ, ನಿಮ್ಮಮ್ಮನಿಗೂ ಕೌನ್ಸೆಲಿಂಗ್ ಅಗತ್ಯ ಇದೆ... ನಂಗೆ ಕಾಫಿ ಕುಡೀಬೇಕು ಅನ್ನಿಸ್ತಿದೆ, ಏಳು ಕ್ಯಾಂಟೀನ್‌ಗೆ ಹೋಗಿ ಬರೋಣ' ಅನ್ನುತ್ತ ಹೊರಟಳು.

ಜಯದೇವನ ಅಪ್ಪ, ಅಮ್ಮನ ಅನೂಹ್ಯ ಬದುಕು ಕಥೆ, ಕವಿತೆಗೆ ಹೇಳಿ ಮಾಡಿಸಿದಂತಿದೆ ಅಂತ ಯೋಚಿಸುತ್ತ ಹೆಜ್ಜೆ ಹಾಕಿದಳು. ಜಯದೇವ ಅವಳನ್ನು ಹಿಂಬಾಲಿಸಿದ.


## ಪ್ರೇಮಕುಮಾರ್ ಹರಿಯಬ್ಬೆ

ಚಿತ್ರದುರ್ಗ ಜಿಲ್ಲೆಯ ಹರಿಯಬ್ಬೆ ಗ್ರಾಮದವರು. ವೃತ್ತಿಯಿಂದ ಪತ್ರಕರ್ತ. ಈಗ ಬೆಂಗಳೂರಿನಲ್ಲಿ ವಾಸ. 'ಪ್ರಜಾವಾಣಿ', 'ಸುಧಾ', 'ಮಯೂರ' ಪತ್ರಿಕೆಗಳಲ್ಲಿ ಅವರ ಕಥೆಗಳು ಪ್ರಕಟವಾಗಿವೆ.